www.kannadawords.com

**ದೋಹಾ**

**ಶ್ರೀ ಗುರು ಚರಣ ಸರೋಜ ರಜ ನಿಜಮನ ಮುಕುರ ಸುಧಾರಿ ।**
**ವರಣೌ ರಘುವರ ವಿಮಲಯಶ ಜೋ ದಾಯಕ ಫಲಚಾರಿ.**
(ಶ್ರೀ ಗುರುವಿನ ಪಾದ ಕಮಲಗಳ ಧೂಳಿನಿಂದ ನನ್ನ ಮನಸ್ಸೆಂಬಕನ್ನಡಿಯನ್ನು ಬೆಳಗಿ,ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ನೀಡುವ ಶ್ರೀ ರಘುರಾಮನ ವಿಮಲ ಚರಿತ್ರೆಯನ್ನು ವರ್ಣಿಸುವೆನು)

**ಬುದ್ಧಿಹೀನ ತನುಜಾನಿಕೈ ಸುಮಿರೌ ಪವನ ಕುಮಾರ ।**
**ಬಲ ಬುದ್ಧಿ ವಿದ್ಯಾ ದೇಹು ಮೋಹಿ ಹರಹು ಕಲೇಶ ವಿಕಾರ .**
(ಪವನಕುಮಾರನೇ ನನ್ನನ್ನು ಬುದ್ಧಿಹೀನನೆಂದು ತಿಳಿದು ನನಗೆ ಬಲ ಬುದ್ಧಿ ವಿದ್ಯೆಗಳನ್ನು ನೀಡಿ ನನ್ನಲಿರುವ ದೋಷಗಳನ್ನು ಕಷ್ಟಗಳನ್ನು ಪರಿಹರಿಸು)

**ಧ್ಯಾನಮ್**

ಗೋಷ್ಪದೀಕೃತ ವಾರಾಶಿಂ ಮಶಕೀಕೃತ ರಾಕ್ಷಸಮ್ |
ರಾಮಾಯಣ ಮಹಾಮಾಲಾ ರತ್ನಂ ವಂದೇ-(ಅ)ನಿಲಾತ್ಮಜಮ್ ‖
ಯತ್ರ ಯತ್ರ ರಘುನಾಥ ಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಮ್ |
ಭಾಷ್ಪವಾರಿ ಪರಿಪೂರ್ಣ ಲೋಚನಂ ಮಾರುತಿಂ ನಮತ ರಾಕ್ಷಸಾಂತಕಮ್ ‖

**ಚೌಪಾಈ**

**ಜಯ ಹನುಮಾನ ಜ್ಞಾನ ಗುಣ ಸಾಗರ |**
**ಜಯ ಕಪೀಶ ತಿಹು ಲೋಕ ಉಜಾಗರ |1|**
(ಜ್ಞಾನ ಗುಣಸಾಗರನಾದ ಹನುಮಂತನೇ ನಿನಗೆ ಜಯವಾಗಲಿ ಮೂರೂ ಲೋಕಗಳನ್ನು ಜ್ಞಾನದಿಂದ ಬೆಳಗುವ ನಿನಗೆ ಜಯವಾಗಲಿ )

**ರಾಮದೂತ ಅತುಲಿತ ಬಲಧಾಮಾ |**
**ಅಂಜನಿ ಪುತ್ರ ಪವನಸುತ ನಾಮಾ |2|**
( ರಾಮದೂತನೇ ಅಪರಿಮಿತ ಬಲವುಳ್ಳವನೇ ಅಂಜನಿ ದೇವಿಯ ಪುತ್ರನೆ ಪಾವನಸುತನೇ )

**ಮಹಾವೀರ ವಿಕ್ರಮ ಬಜರಂಗೀ |**
**ಕುಮತಿ ನಿವಾರ ಸುಮತಿ ಕೇ ಸಂಗೀ |3|**
(ಮಹಾವೀರನೇ ,ವಿಕ್ರಮನೇ ,ವಜ್ರಾಂಗನೆ, ನೀನು ದುರ್ಬುದ್ಧಿಯನ್ನು ಹೋಗಲಾಡಿಸಿ, ಸುಬುದ್ಧಿಯನ್ನು ಕೊಡುವವನು )

**ಕಂಚನ ವರಣ ವಿರಾಜ ಸುವೇಶಾ |**
**ಕಾನನ ಕುಂಡಲ ಕುಂಚಿತ ಕೇಶಾ |4|**
(ನೀನು ಚಿನ್ನದಂತಹ ಮೈಬಣ್ಣವುಳ್ಳವನು,ನಿನ್ನ ಕಿವಿಯಲ್ಲಿ ಕುಂಡಲಗಳು,ನಿನ್ನದು ಗುಂಗುರು ಕೂದಲು, ಉತ್ತಮ ವೇಷ ಧರಿಸಿ ಶೋಭಿಸುತ್ತಿರುವೆ)

**ಹಾಥವಜ್ರ ಔ ಧ್ವಜಾ ವಿರಾಜೈ** |
**ಕಾಂಥೇ ಮೂಂಜ ಜನೇವೂ ಸಾಜೈ** |5|
(ನಿನ್ನ ಕೈಯೆಯಲ್ಲಿ ವಜ್ರಾಯುಧ ಮತ್ತು ಧ್ವಜವು ರಾರಾಜಿಸುತ್ತಿದೆ. ಹೆಗಲಿನಿಂದ ಕೆಳಗೆ ಮುಂಜಿ ಹಾಗು ಜನಿವಾರಗಳಿವೆ)

**ಶಂಕರ ಸುವನ ಕೇಸರೀ ನಂದನ** |
**ತೇಜ ಪ್ರತಾಪ ಮಹಾಜಗ ವಂದನ** |6|
( ನೀನು ರುದ್ರಂಶ ಸಂಭೂತ ಹಾಗೂ ವಾನರರರಸ ಕೇಸರಿಯ ಮಗನು,ತೇಜೋವಂತನಾಗಿ ಪ್ರತಾಪಿಯಾಗಿ ಇಡೀ ಜಗತ್ತಿನಿಂದ ವಂದ್ಯನು )

**ವಿದ್ಯಾವಾನ ಗುಣೀ ಅತಿ ಚಾತುರ** |
**ರಾಮ ಕಾಜ ಕರಿವೇ ಕೋ ಆತುರ** |7|
(ನೀನು ಗುಣವಂತನು,ವಿದ್ಯಾವಂತನು ಅತ್ಯಂತ ಚತುರನೂ,ರಾಮ ಕಾರ್ಯವನ್ನು ಮಾಡಿ ಮುಗಿಸಲು ಸದಾ ಆತುರ ಪಡುವವವನು )

**ಪ್ರಭು ಚರಿತ್ರ ಸುನಿವೇ ಕೋ ರಸಿಯಾ** |
**ರಾಮಲಖನ ಸೀತಾ ಮನ ಬಸಿಯಾ** |8|
(ಶ್ರೀರಾಮಚಂದ್ರನ ಚರಿತೆಯನ್ನು ಆಲಿಸುವುದರಲ್ಲಿ ನಿನಗೆ ಆನಂದ. ಶ್ರೀರಾಮ, ಲಕ್ಷ್ಮಣ, ಸೀತೆ ನಿನ್ನ ಮನಸಿನಲ್ಲಿ ನೆಲೆಸಿ ಬಿಟ್ಟಿದ್ದಾರೆ )

**ಸೂಕ್ಷ್ಮ ರೂಪಧರಿ ಸಿಯಹಿ ದಿಖಾವಾ** |
**ವಿಕಟ ರೂಪಧರಿ ಲಂಕ ಜರಾವಾ** |9|
(ನೀನು ಸೂಕ್ಷ್ಮ ರೂಪ ಧರಿಸಿಕೊಂಡು ಸಿಟಿಗೆ ಕಾಣಿಸಿಕೊಂಡೆ ಅದೇ ಭಯಂಕರ ರೂಪವನ್ನು ಧಾರಣ ಮಾಡಿಕೊಂಡು ಲಂಕೆಯನ್ನು ಸುಟ್ಟೆ )

**ಭೀಮ ರೂಪಧರಿ ಅಸುರ ಸಂಹಾರೇ** |
**ರಾಮಚಂದ್ರ ಕೇ ಕಾಜ ಸಂವಾರೇ**|10|
(ನೀನು ಬೃಹದಾಕಾರ ಧರಿಸಿ ಅಸುರನನ್ನು ಸಂಹರಿಸಿದೆ, ಶ್ರೀರಾಮ ಚಂದ್ರನ ಕಾರ್ಯವನ್ನು ಸಾಂಗಗೊಳಿಸಿದೆ )

**ಲಾಯ ಸಂಜೀವನ ಲಖನ ಜಿಯಾಯೇ** |
**ಶ್ರೀ ರಘುವೀರ ಹರಷಿ ಉರಲಾಯೇ** |11|
(ಸಂಜೀವಿನಿಯನ್ನು ತಂದು ಲಕ್ಷ್ಮನನ್ನೂ ಬದುಕಿಸಿಕೊಂಡೆ. ಶ್ರೀ ರಘುನಾಥನು ಸಂತಸದಿಂದ ನಿನ್ನನು ಆಲಂಗಿಸಿಕೊಂಡನು )

**ರಘುಪತಿ ಕೀನ್ಹೀ ಬಹುತ ಬಡಾಯೀ** |
**ತುಮ ಮಮ ಪ್ರಿಯ ಭರತಹಿ ಸಮ ಭಾಯೀ** |12|
(ನೀನು ನನ್ನ ಸೋದರ ಭಾರತನಷ್ಟೇ ನನಗೆ ಪ್ರಿಯನು ಎಂದು ಶ್ರೀ ರಾಮಚಂದ್ರನು ನಿನ್ನನ್ನು ಬಹುವಾಗಿ ಹೊಗಳಿದ್ದಾನೆ)

**ಸಹಸ ವದನ ತುಮ್ಹರೋ ಯಶಗಾವೈ** |
**ಅಸ ಕಹಿ ಶ್ರೀಪತಿ ಕಂಠ ಲಗಾವೈ** |13|
(ಆದಿಶೇಷನು ಸಹಸ್ರ ಮುಖಗಳಿಂದ ನಿನ್ನ ಕೀರ್ತಿಯನ್ನು ಹಾದಿ ಹೊಗಳುತ್ತಾನೆ ಎನ್ನುತ್ತಾ ಶ್ರೀಪತಿಯ ನಿನ್ನನ್ನು ಆಲಂಗಿಸಿಕೊಳ್ಳುತ್ತಾನೆ )

www.kannadawords.com

**ಸನಕಾದಿಕ ಬ್ರಹ್ಮಾದಿ ಮುನೀಶಾ |**
**ನಾರದ ಶಾರದ ಸಹಿತ ಅಹೀಶಾ |14|**
(ಸನಕಾದಿ ಋಷಿವರ್ಯರು,ಬ್ರಹ್ಮಾದಿಗಳು,ನಾರದರು,ಸರಸ್ವತಿಯೂ ಆದಿಶೇಷನು)

**ಯಮ ಕುಬೇರ ದಿಗಪಾಲ ಜಹಾಂ ತೇ |**
**ಕವಿ ಕೋವಿದ ಕಹಿ ಸಕೇ ಕಹಾಂ ತೇ |15|**
(ಯಮನು ಕುಬೇರನು ದಿಕ್ಪಾಲಕರು ಕವಿಕೋವಿದರು ನಿನ್ನ ಮಹಿಮೆಯನ್ನು ಎಷ್ಟೊಂದು ವರ್ಣಿಸಿಯರು )

**ತುಮ ಉಪಕಾರ ಸುಗ್ರೀವಹಿ ಕೀನ್ಹಾ |**
**ರಾಮ ಮಿಲಾಯ ರಾಜಪದ ದೀನ್ಹಾ |16|**
(ನೀನು ಸುಗ್ರೀವನಿಗೆ ಉಪಕಾರವನ್ನು ಮಾಡಿದೆ.ರಾಮನ ಸಖ್ಯ ಮಾಡಿಸಿ ಅವನಿಗೆ ರಾಜ್ಯ ಪದವಿ ಸಿಗುವಂತೆ ಮಾಡಿದೆ.)

**ತುಮ್ಹರೋ ಮಂತ್ರ ವಿಭೀಷಣ ಮಾನಾ |**
**ಲಂಕೇಶ್ವರ ಭಯೇ ಸಬ ಜಗ ಜಾನಾ|17|**
(ನೀನು ಕೊಟ್ಟ ಸಲಹೆಯನ್ನು ವಿಭೀಷಣನು ಪಾಲಿಸಿದನು.ಆದರಿಂದಲೇ ಅವನು ಲಂಕಾಧಿಪತಿಯಾದನೆಂಬುದನ್ನು ಇಡೀ ಜಗತ್ತೇ ಬಲ್ಲದು)

**ಯುಗ ಸಹಸ್ರ ಯೋಜನ ಪರ ಭಾನೂ |**
**ಲೀಲ್ಯೋ ತಾಹಿ ಮಧುರ ಫಲ ಜಾನೂ |18|**
(ಎರಡು ಸಹಸ್ರ ಯೋಜನೆ ದೂರವಿದ್ದ ಸೂರ್ಯವನ್ನು ಮಧುರ ಫಲವೆಂದು ತಿಳಿದು ಅವನೆಡೆಗೆ ಹಾರಿದೆ)

**ಪ್ರಭು ಮುದ್ರಿಕಾ ಮೇಲಿ ಮುಖ ಮಾಹೀ |**
**ಜಲಧಿ ಲಾಂಘಿ ಗಯೇ ಅಚರಜ ನಾಹೀ |19|**
(ಶ್ರೀರಾಮಚಂದ್ರನಿತ್ತ ಮುದ್ರೆಯನ್ನು ಬಾಯಲ್ಲಿಟ್ಟು ನೀನು ಸಮುದ್ರದಮೇಲೆ ಹಾರುತ್ತ ಅದನ್ನು ದಾಟಿದೆ ಅಂದರೆ ಇದರಲ್ಲಿ ಏನು ಆಶ್ಚರ್ಯವಿಲ್ಲ)

**ದುರ್ಗಮ ಕಾಜ ಜಗತ ಕೇ ಜೇತೇ |**
**ಸುಗಮ ಅನುಗ್ರಹ ತುಮ್ಹರೇ ತೇತೇ |20|**
(ಪ್ರಪಂಚದಲ್ಲಿ ದುರ್ಗಮವೆನಿಸುವ ಎಷ್ಟೆಲ್ಲಾ ಕಾರ್ಯಗಳು ಇವೆಯೋ ಅವೆಲ್ಲ ನಿನ್ನ ಅನುಗ್ರಹವಾದ ಕಾರಣ ಸುಲಭವೆನಿಸುತ್ತವೆ)

**ರಾಮ ದುಆರೇ ತುಮ ರಖವಾರೇ |**
**ಹೋತ ನ ಆಜ್ಞಾ ಬಿನು ಪೈಸಾರೇ |21|**
(ನೀನು ರಾಮನ ಮನೆಯ ಬಾಗಿಲನ್ನು ಕಾಯುವವನು ನಿನ್ನ ಅನುಮತಿಯಿಲ್ಲದೆ ಅಲ್ಲಿಗೆ ಯಾರಿಗೂ ಪ್ರವೇಶವಿಲ್ಲ)

**ಸಬ ಸುಖ ಲಹೈ ತುಮ್ಹಾರೀ ಶರಣಾ |**
**ತುಮ ರಕ್ಷಕ ಕಾಹೂ ಕೋ ಡರ ನಾ |22|**
(ನಿನ್ನಲಿ ಶರಣು ಬಂದವರಿಗೆ ಸಕಲ ಸುಖಗಳು ಲಭಿಸುತ್ತವೆ. ನೈನ್ ರಕ್ಷಕನಾದರೆ ಯಾರಿಗೂ ಭಯ ಪಡಬೇಕಾದುದ್ದಿಲ್ಲ )

**ಆಪನ ತೇಜ ತುಮ್ಹಾರೋ ಆಪೈ |**
**ತೀನೋಂ ಲೋಕ ಹಾಂಕ ತೇ ಕಾಂಪೈ |23|**
(ನಿನ್ನ ತೇಜಸ್ಸನ್ನು ನೀನೇ ನಿಗ್ರಹಿಸಿಕೋ ,ನಿನ್ನ ಒಂದು ಗರ್ಜನೆಯಿಂದ ಮೂರೂ ಲೋಕಗಳು ನಡುಗುತ್ತವೆ)

**ಭೂತ ಪಿಶಾಚ ನಿಕಟ ನಹಿ ಆವೈ |**
**ಮಹವೀರ ಜಬ ನಾಮ ಸುನಾವೈ |24|**
(ನಿನ್ನನ್ನು ಸ್ಮರಿಸಿದ ಮಾತ್ರದಿಂದ ಭೂತ ಪಿಶಾಚಿಗಳು ಹತ್ತಿರ ಸುಳಿಯುವುದಿಲ್ಲ)

**ನಾಸೈ ರೋಗ ಹರೈ ಸಬ ಪೀರಾ |**
**ಜಪತ ನಿರಂತರ ಹನುಮತ ವೀರಾ |25|**
(ವೀರನಾದ ಹನುಮಂತನೇ ನಿನ್ನ ನಾಮವನ್ನು ನಿರಂತರ ಜಪಿಸುವುದರಿಂದ ಸಕಲ ರೋಗಗಳು ದೂರವಾಗುತ್ತವೆ,ಎಲ್ಲ ಕಷ್ಟಗಳು ಕಳೆಯುತ್ತವೆ )

**ಸಂಕಟ ಸೇಂ ಹನುಮಾನ ಛುಡಾವೈ |**
**ಮನ ಕ್ರಮ ವಚನ ಧ್ಯಾನ ಜೋ ಲಾವೈ |26|**
(ಮಾನಸ ವಾಚಾ ಕರ್ಮಣಾ ಯಾರು ಹನುಮಂತನನ್ನು ಸ್ಮರಿಸುತ್ತಾರೋ ಅವರ ಸಂಕಷ್ಟಗಳು ದೂರ ಮಾಡುತ್ತಾನೆ )

**ಸಬ ಪರ ರಾಮ ತಪಸ್ವೀ ರಾಜಾ |**
**ತಿನಕೇ ಕಾಜ ಸಕಲ ತುಮ ಸಾಜಾ |27|**
(ಯಾರೇ ಆಗಲಿ ರಾಮನ ಭಕ್ತರಾದರೆ ಅವರ ಕಾರ್ಯಗಳನ್ನು ನೀನೇ ಸಾಂಗಗೊಳಿಸುತ್ತೀಯೆ)

**ಔರ ಮನೋರಥ ಜೋ ಕೋಯಿ ಲಾವೈ |**
**ತಾಸು ಅಮಿತ ಜೀವನ ಫಲ ಪಾವೈ |28|**
(ಇನ್ಯಾವುದೇ ಮನೋರಥವನ್ನು ಹನುಮಂತನಲ್ಲಿ ಹೇಳಿಕೊಂಡರೆ ಅವ್ರಿಗೆ ಜೀವಕ್ಕದ ಎಲ್ಲ ಫಲಗಳು ದೊರಕುತ್ತವೆ)

**ಚಾರೋ ಯುಗ ಪರಿತಾಪ ತುಮ್ಹಾರಾ |**
**ಹೈ ಪರಸಿದ್ದ ಜಗತ ಉಜಿಯಾರಾ |29|**
(ನಿನ್ನ ಪ್ರತಾಪವು ಚತುರ್ಯುಗಗಳಲ್ಲಿ ಹರಡಿದೆ.ನಿನ್ನ ಯಶೋ ಕೀರ್ತಿಯು ಜಗತ್ಪ್ರಸಿದ್ದವಾದದ್ದು )

**ಸಾಧು ಸಂತ ಕೇ ತುಮ ರಖವಾರೇ |**
**ಅಸುರ ನಿಕಂದನ ರಾಮ ದುಲಾರೇ |30|**
(ನೀನು ಸಾಧು ಸಂತರ ರಕ್ಷಕನು,ರಾಕ್ಷಸರನ್ನು ಸಂಹರಿಸಿದರಾಮ ಪ್ರಿಯನು )

**ಅಷ್ಟಸಿದ್ಧಿ ನವ ನಿಧಿ ಕೇ ದಾತಾ |**
**ಅಸ ವರ ದೀನ್ಹ ಜಾನಕೀ ಮಾತಾ |31|**
(ಜಾನಕಿಮಾತೆಯು ನೀನು ಅಷ್ಟ ಸಿದ್ಧಿಗಳನ್ನು ನವ ನಿಧಿಗಳನ್ನು ಕೊಡುವವನಾಗು ಎಂದು ವರವನ್ನು ನೀಡಿದಳು)

**ರಾಮ ರಸಾಯನ ತುಮ್ಹಾರೇ ಪಾಸಾ |**
**ಸಾದ ರಹೋ ರಘುಪತಿ ಕೇ ದಾಸಾ** |32|
(ರಾಮಭಕ್ತಿ ಎಂಬ ರಾಸಾಯನ ನಿನ್ನ ಬಳಿಯಿದೆ.ನೀನು ಸದಾಕಾಲ ರಘುನಾಥನ ದಾಸನಾಗಿರು)

**ತುಮ್ಹರೇ ಭಜನ ರಾಮಕೋ ಪಾವೈ |**
**ಜನ್ಮ ಜನ್ಮ ಕೇ ದುಖ ಬಿಸರಾವೈ** |33|
(ನಿನ್ನ ಸ್ಮರಣೆ ಮಾಡಿದರೆ ಅಹರಿರಾಮನೇ ನಮಗೆ ಲಭ್ಯವಾಗುತ್ತದೆ. ಜನ್ಮ ಜನ್ಮಾಂತರಗಳ ದುಃಖವನ್ನು ಮರೆಯುತ್ತಾನೆ)

**ಅಂತ ಕಾಲ ರಘುವರ ಪುರಜಾಯೀ |**
**ಜಹಾಂ ಜನ್ಮ ಹರಿಭಕ್ತ ಕಹಾಯೀ** |34|
(ಅಂತ್ಯಕಾಲ ಬಂದಾಗ ರಘುನಾಥನ ನಗರಿಯಲ್ಲಿ ಜನ್ಮಿಸಿ ಹರಿಭಕ್ತನೆಂಬ ಕೀರ್ತಿಯನ್ನು ಪಡೆಯುತ್ತಾನೆ)

**ಔರ ದೇವತಾ ಚಿತ್ತ ನ ಧರಯೀ |**
**ಹನುಮತ ಸೇಯಿ ಸರ್ವ ಸುಖ ಕರಯೀ** |35|
(ಉಳಿದ್ಯಾವ ದೇವತೆಗಳನ್ನು ಮನಸ್ಸಿಗೆ ತರದೇ , ಹನುಮಂತನ್ನು ಸೇವಿಸಿ ಸಕಲ ಸುಖಗಳನ್ನು ಪಡೆಯುತ್ತಾರೆ)

**ಸಂಕಟ ಕಟೈ ಮಿಟೈ ಸಬ ಪೀರಾ |**
**ಜೋ ಸುಮಿರೈ ಹನುಮತ ಬಲ ವೀರಾ** |36|
(ಮಹಾವೀರನಾದ ಹನುಮಂತನನ್ನು ಸ್ಮರಿಸುವುದರಿಂದ ಎಲ್ಲ ಸಂಕಷ್ಟಗಳು ನೋವುಗಳು ಪರಿಹಾರವಾಗುತ್ತವೆ)

**ಜೈ ಜೈ ಜೈ ಹನುಮಾನ ಗೋಸಾಯೀ |**
**ಕೃಪಾ ಕರೋ ಗುರುದೇವ ಕೀ ನಾಯೀ** |37|
(ಹನುಮಂತ ದೇವರೇ ನಿನಗೆ ಜಯವಾಗಲಿ. ಗುರುದೇವನಂತೆ ನಮ್ಮಲ್ಲಿ ಕೃಪೆಯಿಡು )

**ಜೋ ಶತ ವಾರ ಪಾಠ ಕರ ಕೋಯೀ |**
**ಛೂಟಹಿ ಬಂದಿ ಮಹಾ ಸುಖ ಹೋಯೀ**|38|
(ಇದನ್ನು ಯಾರು ನೂರು ಬಾರಿ ಪಠಣ ಮಾಡುವರೋ ಅವರು ಭವ ಬಂಧನಗಳಿಂದ ಬಿಡುಗಡೆ ಹೊಂದಿ ಮಹಾ ಸುಖವನ್ನು ಪಡೆಯುವರು)

**ಜೋ ಯಹ ಪಡೈ ಹನುಮಾನ ಚಾಲೀಸಾ |**
**ಹೋಯ ಸಿದ್ಧಿ ಸಾಖೀ ಗೌರೀಶಾ** |39|
(ಈ ಸ್ತೋತ್ರ ಹನುಮಾನ ಚಾಲೀಸವನ್ನು ಯಾರು ಪಠಣ ಮಾಡುತ್ತಾರೋ ಅವರಿಗೆ ಸಕಲ ಸಿದ್ಧಿಗಳು ಲಭಿಸುತ್ತವೆ ಎಂಬುದಕ್ಕೆ ಶಂಕರನೇ ಸಾಕ್ಷಿ )

**ತುಲಸೀದಾಸ ಸದಾ ಹರಿ ಚೇರಾ |**
**ಕೀಜೈ ನಾಥ ಹೃದಯ ಮಹ ಡೇರಾ** |40|
(ಈ ಹನುಮಾನ ಚಾಲೀಸವನ್ನು ರಚಿಸಿದ ಹರಿಯ ದಾಸರಾದ ತುಲಸೀದಾಸರು ಎಲೈ ಸ್ವಾಮಿಯೇ ಸದಾ ನನ್ನ ಹೃದಯದಲ್ಲಿ ನೆಲೆಸು ಎಂದು ಪ್ರಾರ್ಥಿಸುತ್ತಾರೆ )

**॥ ದೋಹಾ ॥**

ಪವನ ತನಯ ಸಂಕಟ ಹರಣ – ಮಂಗಳ ಮೂರತಿ ರೂಪ್ |
ರಾಮ ಲಖನ ಸೀತಾ ಸಹಿತ – ಹೃದಯ ಬಸಹು ಸುರಭೂಪ್.
ಸಿಯಾವರ ರಾಮಚಂದ್ರುಕೀ ಜಯ | ಪವನಸುತ ಹನುಮಾನಕೀ ಜಯ | ಬೋಲೋ ಭಾಯೀ
ಸಬ ಸಂತನಕೀ ಜಯ |
(ವಾಯುಪುತ್ರನೇ ಸಂಕಟ ಮೋಚಕನೇ ಮಂಗಳಮಯ ರೂಪ ಹೊಂದಿದ ಮೂರ್ತಿಯೇ
ರಾಮಲಕ್ಷ್ಮಣ ಸಮೇತನಾಗಿ ನನ್ನ ಹೃದಯದಲ್ಲಿ ನೆಲೆಸು)